ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 5001
ಸದಸ್ಯರ ಹೆಸರು : ಶ್ರೀ ಶಿವಣ್ಣ ಎಸ್. (ತುಮಕೂರು)
ಉತ್ತರಿಸಬೇಕಾದ ದಿನಾಂಕ : 13–7–2005
ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	2005–06ನೇ ಸಾಲಿನ ಶಾಲಾ ಪಠ್ಯ ಪುಸ್ತಕ ಮುದ್ರಣಕ್ಕೆ ಸಂಬಂಧಿಸಿದಂತೆ ಯಾವ ಯಾವ ಸಂಸ್ಥೆಗಳಿಗೆ ಕಾರ್ಯಾದೇಶ ನೀಡಲಾಯಿತು: ಯಾವಾಗ ನೀಡಲಾಯಿತು; ಈ ವಹಿ ವಾಟಿನ ಮೌಲ್ಯವೆಷ್ಟು ವಿವರ ಒದಗಿಸುವುದು;	2005–2006ನೇ ಸಾಲಿಗೆ ಉಚಿತ ವಿತರಣೆಯ 164 ಲಕ್ಷ ಪಠ್ಯ ಪುಸ್ತಕಗಳ ಮುದ್ರಣ ಜವಾಬ್ದಾರಿಯನ್ನು ಸರ್ಕಾರಿ ಮುದ್ರಣಾಲಯಕ್ಕೆ ನವೆಂಬರ್ 2004ರಲ್ಲಿ ವಹಿಸಲಾಗಿತ್ತು. ಉಳಿದ 124 ಲಕ್ಷ ಉಚಿತ ವಿತರಣೆಯ ಪಠ್ಯ ಪುಸ್ತಕಗಳು ಮತ್ತು ಮಾರಾಟ ವಿಭಾಗದ ಪಠ್ಯ ಪುಸ್ತಕಗಳ ಮುದ್ರಣ ವಿತರಣಾ ಜವಾಬ್ದಾರಿಯನ್ನು ಕರ್ನಾಟಕ ಪಾರದರ್ಶಕ ಕಾಯ್ದೆಯಡಿ ಆಯ್ಕೆಯಾದ 15 ಖಾಸಗಿ ಮುದ್ರಣ ಸಂಸ್ಥೆಗಳಿಗೆ ಕಾರ್ಯಾದೇಶವನ್ನು ಜನವರಿ, ಫೆಬ್ರವರಿ 2005ರಲ್ಲಿ ನೀಡಲಾಯಿತು. ಒಟ್ಟು ಉಚಿತ ವಿತರಣೆಯ ಪಠ್ಯಪುಸ್ತಕಗಳ ಅಂದಾಜು ಮೌಲ್ಯ ರೂ. 30 ಕೋಟಿ
ಆ.	ಮುದ್ರಣ ಆದೇಶ ನೀಡುವಾಗ ಪಡೆದ ಇ.ಎಂ.ಡಿ. ಮೊತ್ತವೆಷ್ಟು; ಮುದ್ರಣಕ್ಕೆ ನೀಡಿದ್ದ ಕಾಲಾವಕಾಶವೆಷ್ಟು, ಖಾಸಗಿ ಪ್ರಕಾಶನಗಳಿಗೆ ಮುದ್ರಣಕ್ಕೆ ನೀಡಿದ ಪಠ್ಯಪುಸ್ತಕಗಳು ಯಾವುವು; ಅವುಗಳ ಮೌಲ್ಯ ಎಷ್ಟು;	ಖಾಸಗಿ ಮುದ್ರಕ/ಪ್ರಕಾಶಕರಿಗೆ ರೂ. 1ಲಕ್ಷ ಇಎಂಡಿ ಪ್ರತಿ ಪ್ಯಾಕೇಜಿಗೆ ನಿಗದಿಪಡಿಸಲಾಗಿತ್ತು. ಒಟ್ಟು ಪ್ಯಾಕೇಜುಗಳು 31. ಉಚಿತ ವಿತರಣೆಗೆ ಏಪ್ರಿಲ್ 30, ಮಾರಾಟ ವಿಭಾಗಕ್ಕೆ ಮೇ 30 ಖಾಸಗಿ ಮುದ್ರಕ/ಪ್ರಕಾಶಕರಿಗೆ ಮಾರಾಟಕ್ಕೆ 8 ಭಾಷೆ ಮತ್ತು 7 ಭಾಷಾ ಮಾಧ್ಯಮಗಳ ಒಟ್ಟು 308 ಶೀರ್ಷಿಕೆಗಳ ಮುದ್ರಣ ವಿತರಣೆ ಖಾಸಗಿ ಮಾರಾಟದ ಪಠ್ಯಪುಸ್ತಕಗಳ ಅಂದಾಜು ಮೌಲ್ಯ ರೂ. 25 ಕೋಟಿ.

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಇ.	ಮುದ್ರಣಕ್ಕೆ ನೀಡಿದ ಜವಾಬ್ದಾರಿಯನ್ನು ಮತ್ತು ಕಾಲಮಿತಿಯನ್ನು ಉಲ್ಲಂಘಿಸಿದ ಹಾಗೂ ಪಠ್ಯ ಪುಸ್ತಕ ಸರಬರಾಜು ಮಾಡದ ಸರ್ಕಾರಿ ಮುದ್ರಣಾಲಯ ಹಾಗೂ ಖಾಸಗಿ ಪ್ರಕಾಶನಗಳು ಯಾವುವು; ಇವುಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;	2005-06ನೇ ಸಾಲಿನಲ್ಲಿ ಸರ್ಕಾರಿ ಮುದ್ರಣಾಲಯ ಮತ್ತು ಖಾಸಗಿ ಮುದ್ರಕ/ ಪ್ರಕಾಶಕರು ಉಚಿತ ವಿತರಣೆಯ ಪಠ್ಯಪುಸ್ತಕಗಳನ್ನು ಸಕಾಲಕ್ಕೆ ಮುದ್ರಣ ಮಾಡಿ ಸರಬರಾಜು ಮಾಡಿರುತ್ತಾರೆ. ಖಾಸಗಿ ಮುದ್ರಕ/ ಪ್ರಕಾಶಕರು ಮಾರಾಟ ವಿಭಾಗದ ಕೆಲವು ಪಠ್ಯ ಪುಸ್ತಕಗಳ ಮುದ್ರಣ ವಿತರಣೆಯಲ್ಲಿ ಸ್ವಲ್ಪವಿಳಂಬ ಮಾಡಿದ್ದು ಅಂತಹ ಮುದ್ರಕ/ ಪ್ರಕಾಶಕರುಗಳ ವಿರುದ್ಧ ಟೆಂಡರ್ ನಿಯಮಗಳಡಿ ಈಗಾಗಲೇ ಕ್ರಮವನ್ನು ಜರುಗಿಸಲಾಗುತ್ತಿದೆ.
ಈ	ಶೈಕ್ಷಣಿಕ ವರ್ಷ ಪ್ರಾರಂಭವಾದರೂ ಸರ್ಕಾರಿ ಶಾಲೆಗಳಲ್ಲಿ ಹಾಗೂ ಮಾರುಕಟ್ಟೆಯಲ್ಲಿ ಪಠ್ಯ ಪುಸ್ತಕ ದೊರೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ವಿವರಿಸುವುದು?	ಶೈಕ್ಷಣಿಕ ವರ್ಷದ ಪ್ರಾರಂಭದ ದಿನವೇ ಸರ್ಕಾರಿ ಶಾಲೆಗಳಲ್ಲಿ ಉಚಿತ ಪಠ್ಯಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ. ಆದ್ದರಿಂದ ಸರ್ಕಾರಿ ಶಾಲೆಗಳಲ್ಲಿ ಪಠ್ಯಪುಸ್ತಕ ಶೈಕ್ಷಣಿಕ ವರ್ಷ ಪ್ರಾರಂಭವಾದರೂ ದೊರೆಯದೆ ಇರುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬರುವ ಪ್ರಶ್ನೆ ಉದ್ಭವಿಸುವುದಿಲ್ಲ. ಮಾರುಕಟ್ಟೆಯಲ್ಲಿ ಮಾರಾಟ ವಿಭಾಗದ ಪಠ್ಯ ಪುಸ್ತಕಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದ ತಕ್ಷಣ ಉಚಿತ ವಿತರಣೆಯ ಪಠ್ಯಪುಸ್ತಕಗಳನ್ನು ವಿತರಿಸಿ ಹೆಚ್ಚುವರಿಯಾಗಿ ಉಳಿದವುಗಳನ್ನು ಕೂಡಲೇ ಮಾರುಕಟ್ಟೆಗೆ ಬಿಡುಗಡೆ ಮಾಡಲು ಕ್ರಮ ಕೈಗೊಂಡಿದೆ. ಖಾಸಗಿ ಮುದ್ರಕ/ ಪ್ರಕಾಶಕರ ಸಭೆಯನ್ನು ಆಗಿಂದಾಗ್ಗೆ ಕರೆದು ಮಾರುಕಟ್ಟೆಯಲ್ಲಿ ಕೊರತೆ ಇರುವ ಪಠ್ಯಪುಸ್ತಗಳ ಬಗ್ಗೆ ಸಮೀಕ್ಷೆ ನಡೆಸಿ, ಅಂತಹ ಪಠ್ಯ ಪುಸ್ತಕಗಳನ್ನು ಕೂಡಲೇ

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
		ಮುದ್ರಿಸಿ ಸರಬರಾಜು ಮಾಡಲು ಆದೇಶ ನೀಡಿದೆ. ಖಾಸಗಿ ಮುದ್ರಕ/ ಪ್ರಕಾಶಕರು ಮುದ್ರಿಸಿ ಸರಬರಾಜು ಮಾಡುವ ಪಠ್ಯ ಪುಸ್ತಕಗಳ ಬೆಲೆ ಅತಿ ಕಡಿಮೆಯಾಗಿದ್ದು ಇದರಿಂದ ನಷ್ಟವಾಗುತ್ತಿದ್ದು, ಇದರ ಬಗ್ಗೆ ಸರ್ಕಾರವನ್ನು ದರ ಮರು ಪರಿಶೀಲಿಸಲು ಕೋರಿಕೊಳ್ಳಲಾಗಿ ಸರ್ಕಾರ ಅದನ್ನು ಪರಿಶೀಲಿಸಿ ದರವನ್ನು ಪರಿಷ್ಕರಿಸಿದೆ.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಮೇಲುನೋಟಕ್ಕೆ ನನಗನ್ನಿಸುತ್ತದೆ ಸಾಬೀತಾಗಿರತಕ್ಕದ್ದು ಎಂದು. ಏಕೆಂದರೆ ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರತಕ್ಕ ಒಂದು ಪ್ರಶ್ನೆ. ಮಕ್ಕಳ ಭವಿಷ್ಯ ತ್ರೈಮಾಸಿಕ ಪರೀಕ್ಷೆ ಆಗಲೆ ಬರತಕ್ಕ ದೃಷ್ಟಿಯೊಳಗೆ ಏನು ಅಂಕಿ–ಸಂಖ್ಯೆಗಳನ್ನು ಕೊಟ್ಟಿದ್ದಾರೆ ಪಠ್ಯಪುಸ್ತಕಗಳನ್ನು ಕೊಡಬೇಕಾಗಿತ್ತು ಅದನ್ನು ಕೊಟ್ಟಿಲ್ಲ. ಮೇಲಾಗಿ ಕೊಡಬೇಕು. ಈಗ ಅಲ್ಲಿ ಏನು ಕಾಗದದ ಪ್ರಿಂಟಿಂಗ್ ಪ್ರೆಸ್ ಇತ್ತು ಈ ಪ್ರೆಸ್‌ಗಳಿಗೆ ಮೊನ್ನೆ ನಮ್ಮ ಜಿಲ್ಲಾ ಮಂತ್ರಿಗಳು ಹೋಗಿ ಅಲ್ಲಿ ಆಗಿರತಕ್ಕ ಕೆಟ್ಟದ್ದು, ಒಳ್ಳೆಯದನ್ನು ತಪಾಸಣೆ ಮಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಬಂದಾಗಲೂ ಅವ್ಯವಹಾರವಾಗಿರತಕ್ಕದ್ದರ ಬಗ್ಗೆ ಗಮನ ಹರಿಸಿದ್ದಾರೆ. ಏಕೆಂದರೆ ಅಂಕಿ ಸಂಖ್ಯೆಗಳನ್ನು ಮಾನ್ಯ ಮಂತ್ರಿಯವರಿಗೆ ನಮ್ಮ ಅಧಿಕಾರಿಗಳೇನಿದ್ದಾರೆ ಅದನ್ನು ಕೊಟ್ಟಿರತಕ್ಕದ್ದು ನಿಜಕ್ಕೂ ಸತ್ಯಕ್ಕೆ ದೂರವಾದದ್ದು, ಇದರಿಂದ ಸರ್ಕಾರದ ಬೊಕ್ಕಸಕ್ಕೆ ಸುಮಾರು 30 ಕೋಟಿಯ ಮೇಲೆ ನಷ್ಟವಾಗಿದೆಯೆಂದು ನಮ್ಮ ಗಮನಕ್ಕೆ ಬಂದಿದೆ. ಮೊನ್ನೆ ಪತ್ರಿಕೆಯವರು, ಎಲೆಕ್ಟ್ರಾನಿಕ್ ಮಿಡಿಯಾದವರು

ಇಷ್ಟೂ ಜನ ಹೋಗಿ ಅಲ್ಲಿರತಕ್ಕದ್ದೇನು ಒಳ್ಳೆಯದು, ಕೆಟ್ಟದನ್ನು ನೋಡುತ್ತಿರಬೇಕಾದರೆ ಅವರಿಗೂ ತ್ರೆಟನ್ ಮಾಡಿದ್ದಾರೆ. ಅವರಿಗೂ ಒದೆ ಹೊಡೆದಿದ್ದಾರೆ. ಈ ದೃಷ್ಟಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಮೊನ್ನೆ ಜಿಲ್ಲಾ ಮಂತ್ರಿಗಳು ಬಂದಾಗ ಈ ವಿಷಯದ ಬಗ್ಗೆ ಗಮನಹರಿಸಿ ಸಿ.ಒ.ಡಿ.ಗೆ ರೆಫರ್ ಮಾಡಬೇಕೆಂದು ಹೇಳಿದ್ದರು. ನಾನು ನಮ್ಮ ಮಾನ್ಯ ಮಂತ್ರಿಗಳನ್ನು ಇದೇ ರೀತಿ ಕೇಳುತ್ತಿದ್ದೇನೆ. ಮುಂದೆ ಈ ರೀತಿ ಆಗುವುದು ಬೇಡ. ಈಗ ಮೂರು ನಾಲ್ಕು ತಿಂಗಳಿನಲ್ಲಿ ಪರೀಕ್ಷೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಪಠ್ಯಪುಸ್ತಕಗಳನ್ನು ಕೊಡಬೇಕು. ಮೇಲಾಗಿ ಅಂಕಿಸಂಖ್ಯೆಗಳನ್ನು ಸರಿಯಾಗಿ ಕೊಟ್ಟು ಅದನ್ನು ಸರಿಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಮೇಲಾಗಿ ಇದನ್ನು ತನಿಖೆ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಸರ್ಕಾರಿ ಶಾಲೆಗಳಲ್ಲಿ 2 ಕೋಟಿ 88 ಲಕ್ಷ ಪುಸ್ತಕವನ್ನು ನಾವು ಮೇ ಕೊನೆಯಷ್ಟರಲ್ಲಿಯೇ ಕೊಟ್ಟಿದ್ದೇವೆ. ನೂರಕ್ಕೆ ನೂರು ಭಾಗ ಎಂದು ಹೇಳಬಹುದು. ಆದರೆ ಸುಮಾರು 2 ಕೋಟಿ 20 ಲಕ್ಷ ಪುಸ್ತಕಗಳು ಖಾಸಗಿ ಶಾಲೆಗಳಿಗೆ ಮಾರುಕಟ್ಟೆಯಲ್ಲಿ ನಾವು ಕೊಡಬೇಕಾಗಿತ್ತು. ಇದರಲ್ಲಿ ಕೆಲವು ಐಟಂ ಬಿಟ್ಟರೆ ಉಳಿದದ್ದೆಲ್ಲ ಬಹುತೇಕ ಎಲ್ಲಾ ಇದೆ. ಕೆಲವು ಕಡೆ ಶಾರ್ಟೇಜ್ ಇದೆ. ನಾನು ಇಲ್ಲವೆಂದು ಹೇಳಲಿಲ್ಲ. ಏಕೆಂದರೆ ಅದು ರೇಟ್ಸ್ ಸ್ವಲ್ಪ ತೀರಾ ಕಡಿಮೆಯಾಯಿತು ಎಂದು ಪ್ರಿಂಟರ್ಸ್ ಪ್ರಿಂಟ್ ಮಾಡುವುದು ಸ್ವಲ್ಪ ನಿಧಾನವಾಯಿತು. ನಾವು ಸತತವಾಗಿ ಇಲಾಖೆಯವರು ಅವರನ್ನೆಲ್ಲ ಕರೆದು ಸಭೆಗಳನ್ನು ಮಾಡಿ ಎಲ್ಲವನ್ನು ಮಾಡಿದ್ದಾರೆ. ಈ ವಾರದೊಳಗೆ, ಕೆಲವು ಟೈಟಲ್ಸ್ ಮಾತ್ರ ಅದೂ ಪ್ರಿಂಟ್ ಆಗಿದೆ, ಮತ್ತೆ ರೀಪ್ರಿಂಟ್‌ಗೆ ತಡವಾಗಿದೆ, ಇದರ ಬಗ್ಗೆ ಖಂಡಿತ ಕ್ರಮ ತೆಗೆದುಕೊಳ್ಳೋಣ ಮತ್ತು ಗೌರ್ನಮೆಂಟ್ ಪ್ರೆಸ್‌ನಲ್ಲಿ ಮಾನ್ಯ ಶಿವಣ್ಣನವರು ಹೇಳಿದಂತೆ ಅಲ್ಲಿ ಏನಾದರೂ ಅವ್ಯವಹಾರವಾಗಿದ್ದರೆ ತನಿಖೆ ಮಾಡಿಸೋಣ

ಶ್ರೀ ಎಸ್. ಶಿವಣ್ಣ: ತನಿಖೆಯಲ್ಲ, ಅದರ ಬಗ್ಗೆ ತತ್‌ಕ್ಷಣ ತನಿಖೆ ಮಾಡಿಸಬೇಕಾಗಿದೆ. ಏಕೆಂದರೆ ಅವರು ಲೆಕ್ಕ ಸರಿಯಾಗಿ ಕೊಡುತ್ತಿಲ್ಲ. ಒಂದು, ಎರಡು, ಮೂರು ಲಕ್ಷ ಪ್ರಿಂಟಿಂಗ್ ಕೊಟ್ಟರೆ ಸರಿಯಾಗಿದೆಯೆಂದು ಲೆಕ್ಕ ಕೊಡುತ್ತಾರೆ. ಅಲ್ಲಿನ ಕಾರ್ಮಿಕರಿಗೆ ಕೆಲಸವನ್ನೆ ಕೊಡತಕ್ಕದ್ದು ಇಲ್ಲ. ಪ್ರಿಂಟಿಂಗ್ ಪ್ರೆಸ್‌ನ ಹೆಸರನ್ನು ಹೇಳಿ ಬೇರೆಯವರಿಗೆ ಕೆಲಸವನ್ನು ಕೊಡುತ್ತಾರೆ. ಏಕೆಂದರೆ ನಮ್ಮಲ್ಲೆ ತುಮಕೂರಿನಲ್ಲಿ ಅದು ನಡೆದಿರತಕ್ಕದ್ದು. ಸುಮಾರು 8 ಕೋಟಿ ಅವ್ಯವಹಾರವಾಗಿದೆಯೆಂದು ನಮ್ಮ ಗಮನಕ್ಕೆ ಬಂದಿದೆ. ಮೊನ್ನೆ ಜಿಲ್ಲಾ ಮಂತ್ರಿಗಳು ಅಲ್ಲಿಗೆ ಭೇಟಿ ಕೊಟ್ಟಿದ್ದರು. ಅನಂತರ ಅಲ್ಲಿರತಕ್ಕ ಪತ್ರಿಕೆಯವರು, ಎಲೆಕ್ಟ್ರಾನಿಕ್ ಮೀಡಿಯಾದವರು ಅದನ್ನು ನೋಡಿ ಸರ್ಕಾರಕ್ಕೆ ಇಲ್ಲವೆ ನಮ್ಮ ಗಮನಕ್ಕೆ ತರಬೇಕೆಂಬ ದೃಷ್ಟಿಯಿಂದ ಹೋದಾಗ ದೊಡ್ಡ

ಗಲಾಟೆಯಾಗಿದೆ. ಅವರಿಗೆಲ್ಲಾ ತ್ರೆಟನ್ ಮಾಡಿ ಹೊಡೆದಿದ್ದಾರೆ. ಈ ಒಂದು ಅವ್ಯವಸ್ಥೆ ಮಾಡಿರತಕ್ಕ ಆ ಒಂದು ಪ್ರಿಂಟಿಂಗ್ ಪ್ರೆಸ್‌ನಲ್ಲಿ ಅಲ್ಲಿರತಕ್ಕವರೆಲ್ಲ ಒಂದು ರೀತಿ ನಟೋರಿಯಸ್, ಒಂದು ತರ ಅವರು ಭೂಗತ ದೊರೆಗಳಿದ್ದಂತೆ ಆಗಿಬಿಟ್ಟಿದ್ದಾರೆ. ಆದ್ದರಿಂದ ಅದನ್ನು ಸಮಗ್ರವಾಗಿ ತನಿಖೆ ಮಾಡಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಏಕೆ ನೀವು ಮುಲಾಜಿನಲ್ಲಿದ್ದಿರೋ ಎಂದು ಅರ್ಥವಾಗುವುದಿಲ್ಲ. ನಿಮ್ಮ ಗೌರ್ನಮೆಂಟ್ ಪ್ರಿಂಟಿಂಗ್ ಪ್ರೆಸ್ ಇವತ್ತು ಬಿಳಿಯ ಆನೆಯಾಗಿದೆ. ಹಗರಣಗಳು ಎಷ್ಟಿದೆ ಎಂಬ ಬಗ್ಗೆ ಈ ಸದನದಲ್ಲಿ ಸಾಕಷ್ಟು ಚರ್ಚೆ ಮಾಡಿದ್ದೇವೆ. ಅಲ್ಲಿ ಯಾರು ಅವರಿಗೆ ರಕ್ಷಣೆ ಕೊಡುತ್ತಿದ್ದಾರೋ ಆ ಭಗವಂತನಿಗೇ ಗೊತ್ತು. ಈ ರೀತಿ ಆರೋಪ ಇರತಕ್ಕ ಅಧಿಕಾರಿಗಳು ಮುಂದುವರೆದರೆ ನೀವೇನಾದರೂ ಒಳ್ಳೆಯದನ್ನು ಮಾಡಲು ಸಾಧ್ಯವೇ? ಇದು ಮೊದಲನೆಯದು. ಮತ್ತು ತಾವು ಬಂದ ತಕ್ಷಣ ನಾವ್ಯಾರೂ ಕೇಳಲಿಲ್ಲ. ಈ ವರ್ಷ ಪಠ್ಯ ಪುಸ್ತಕ ಶಾಲೆ ಪ್ರಾರಂಭವಾದ ದಿವಸದಿಂದ ಕೊಡುತ್ತೇವೆಂದಿರಿ. ಆದರೆ ಇವತ್ತಿನವರೆಗೂ ಇಲ್ಲ. ಇನ್ನೊಂದು ನೀವು ಹೇಳಿದ್ದೀರ ಪ್ರೈವೇಟ್‌ನವರಿಗೆ ಕೊಡುವುದಿಲ್ಲ ಎಂದು. ಗೌರ್ನಮೆಂಟ್ ಪ್ರೆಸ್ ಮಾಡುವುದಿಲ್ಲ. ಪ್ರೈವೇಟ್‌ನವರಿಗೆ ಕೊಡುವುದಿಲ್ಲ. ಪ್ರೈವೇಟ್‌ನಲ್ಲಿ ಮಾಡಿದವರಿಗೆ ಉತ್ತೇಜನವಿಲ್ಲ, ಅಂದರೆ ಈ ಗೊಂದಲದಲ್ಲಿ ಪಠ್ಯಪುಸ್ತಕಗಳೂ ಇಲ್ಲ. ಗೌರ್ನಮೆಂಟ್ ಪ್ರೆಸ್‌ನಲ್ಲಿ ಇಷ್ಟು ಕೋಟ್ಯಾಂತರ ರೂಪಾಯಿ ಹಾಕಿಬಿಟ್ಟು ಅಲ್ಲಿ ದೊಡ್ಡ ಆಸ್ತಿ ಇದ್ದರೆ ಅಲ್ಲಿ ಹಗಲುದರೋಡೆ ಲೂಟಿ ನಡೆಯುತ್ತಿದ್ದರೆ ಕೈಕಟ್ಟಿಕೊಂಡು ಕುಳಿತಿದ್ದೀರಲ್ಲಾ ಏನು? ಇದು ಯಾರ ಮುಲಾಜು? ಬಿಗಿ ಮಾಡಿ, ಅದನ್ನು ಸರಿ ಮಾಡಿ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ಸಲ ಸರ್ಕಾರಿ ಮುದ್ರಣಾಲಯದಲ್ಲಿ ಕೇವಲ 1 ಕೋಟಿ 64 ಲಕ್ಷ ಪುಸ್ತಕ ಮಾತ್ರ ಪ್ರಿಂಟ್ ಮಾಡಿದ್ದು, ಉಳಿದಂಥ 1 ಕೋಟಿ 20 ಲಕ್ಷ ಪುಸ್ತಕಗಳನ್ನು ಪ್ರೈವೇಟ್‌ನವರಿಗೆ ಕೊಟ್ಟೇ ಮಾಡಿಸಿದ್ದು, 31 ಪ್ಯಾಕೇಜು. ಮತ್ತೆ ಇನ್ನೂ 2 ಕೋಟಿ 20 ಲಕ್ಷ ಇದು ನಾವು ಹಣವನ್ನು ಕೊಟ್ಟು ಕೊಂಡುಕೊಳ್ಳುತ್ತೇವಲ್ಲಾ ಬೇರೆ ಪ್ರೈವೇಟ್ ಶಾಲೆಯವರಿಗೆ, ಇದು ಪ್ರೈವೇಟ್ ಪ್ರಿಂಟರ್ಸ್‌ನಿಂದ ನಮಗೆ ಈ ಸಲ ಸಮಸ್ಯೆಯಾಗಿರುವುದು. ಸರ್ಕಾರಿ ಮುದ್ರಣಾಲಯದಲ್ಲಿ ಈ ಸಲ ಸಮಯಕ್ಕೆ ಸರಿಯಾಗಿ ಕೊಟ್ಟಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೋಟ್ಯಾಂತರ ರೂಪಾಯಿ ಮೊತ್ತದ ಮಿಶಿನರಿಗಳು ಬಂದು ಅಲ್ಲಿ ಕೊಳೆಯುತ್ತಿವೆ. ಮನಸ್ಸು ಮಾಡಿದರೆ ನೀವೇ ಬೇರೆ ಪ್ರೈವೇಟ್‌ನವರದನ್ನು ತಗೆದುಕೊಂಡು ಪ್ರಿಂಟ್ ಮಾಡಿಕೊಡಬಹುದು. ಅಂಥ ಅನುಕೂಲವಿದೆ. ಆದರೆ ತಾವೇನು ಮಾಡುತ್ತಿದ್ದೀರ? ಆ ಮಿಶಿನರಿ ಏನಿದೆ ನಾವು ನೀವು ಹೋಗಿ ನೋಡೋಣ, ನಾನು ತೋರಿಸುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ: ಈ ವರ್ಷ ನಾವೇನು ಮಾಡಿದ್ದೇವೆಂದರೆ, ಹೋದ ವರ್ಷ ಜನವರಿಯಲ್ಲಿ ಪುಸ್ತಕಗಳನ್ನು ಪ್ರಿಂಟಿಂಗ್‌ಗೆ ಕೊಡುತ್ತಿದ್ದೆವು. ಈ ಸಲ ಈ ಏಪ್ರಿಲ್‌ನಲ್ಲೆ ಆರ್ಡರ್ಸ್‌ನ್ನು ಕೊಟ್ಟುಬಿಟ್ಟಿದ್ದೇವೆ. ಅದನ್ನು ಉಪಯೋಗಿಸಿಕೊಳ್ಳಬೇಕೆಂದು ಒಂದು ಲಕ್ಷ ಪ್ರಿಂಟಿಂಗ್‌ಗೆ ಈ ವರ್ಷದ ಏಪ್ರಿಲ್‌ನಲ್ಲೆ ಕೊಟ್ಟು ಬಿಟ್ಟಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅಲ್ಲಿ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮಿಶಿನರಿಗಳನ್ನು ತಂದು ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಅದನ್ನು ಉಪಯೋಗ ಮಾಡದೆ ಹಾಗೆಯೆ ಬಿದ್ದಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಬಿ.ಎಸ್. ಯಡಿಯೂರಪ್ಪ: ಇಲ್ಲಿ ಎರಡು ಭಾಗ. ಪುಸ್ತಕ ಕೊಡುವುದನ್ನು ಕೊಡಿ. ಆ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಮಿಶಿನರಿಗಳನ್ನು ತಂದು ಹಾಗೆಯೇ ಬಿದ್ದಿದೆ. ಕೆಲಸ ಪ್ರಾರಂಭ ಮಾಡಲು ಆ ಮಿಶಿನರಿ ಜೋಡಿಸಿದರೆ ತಾನೆ ಸಾಧ್ಯ. ಆ ರೀತಿ ಮಿಶಿನರಿ ಬಿದ್ದಿರುವುದು ನಿಮ್ಮ ಗಮನಕ್ಕೆ ಬಂದಿದೆಯೆ? ಯಾವಾಗ ಆ ಮಿಶಿನರಿಗಳನ್ನು ಉಪಯೋಗ ಮಾಡಿಕೊಳ್ಳುತ್ತೀರ?

ಶ್ರೀ ಎಸ್. ಶಿವಣ್ಣ : ಅದು ಒಂದೇ ಅಲ್ಲ. ನಮ್ಮಲ್ಲಿ ಅದು ಪ್ರಿಂಟೇ ಆಗಿಲ್ಲ. ಬೇರೆ ಬೇರೆ ಕಡೆ ಪ್ರಿಂಟ್ ಮಾಡಿ ನಮ್ಮ ಪ್ರೆಸ್‌ನಲ್ಲಿ ಪ್ರಿಂಟ್ ಮಾಡಿದ್ದೇವೆಂದು ಪ್ರೆಸ್‌ನ ಹೆಸರನ್ನು ಹೇಳುತ್ತಿದ್ದಾರೆ.

ಶ್ರೀ ರಾಮಲಿಂಗಾರೆಡ್ಡಿ: ಹೋದ ವರ್ಷ ಏನಾಯಿತು ಅದು ಗೊತ್ತಿದೆ, ಅದರ ತನಿಖೆ ಕೂಡ ಆಗುತ್ತಿದೆ.

ಶ್ರೀ ಎಸ್. ಶಿವಣ್ಣ: ನಮ್ಮಲ್ಲೇನು ಗಲಾಟೆಯಾಯಿತು ಅದು ಆಗಲು ಇದೇ ಕಾರಣ. ಏಕೆಂದರೆ ನಮ್ಮಲ್ಲಿ ಮಂಜು ಮುದ್ರಣಾಲಯ ಎನ್ನತಕ್ಕದ್ದು ಇಲ್ಲವೇ ಇಲ್ಲ, ಅಂಥದಕ್ಕೆ ಕೊಟ್ಟು ಮಾಡಿದ್ದೇವೆಂದು ಲೆಕ್ಕಾ ಕೊಡುತ್ತಾರೆ. ಅನಂತರ ನಮ್ಮವರ್ಯಾರೂ ಕಾರ್ಮಿಕರು ಇಲ್ಲ. ಕೇರಳ ಮತ್ತು ತಮಿಳುನಾಡಿನವರು ಮಾತ್ರ ಇದ್ದಾರೆ. ಪೀಸ್ ವರ್ಕ್ ಮಾಡತಕ್ಕ ಜನರನ್ನು ನಮ್ಮವರೊಬ್ಬರನ್ನೂ ತೆಗೆದುಕೊಂಡಿಲ್ಲ. ಪ್ರಿಂಟಿಂಗ್ ಪ್ರೆಸ್ ಹಾಗೆಯೆ ಖಾಲಿ ಉಳಿದಿದೆ. ಬೇರೆ ಕಡೆ ಪ್ರಿಂಟ್ ಮಾಡಿಸಿ ಲೆಕ್ಕ ಕೊಡುತ್ತಾರೆ. ಇದು ಭಾರಿ ಅನ್ಯಾಯವಾಗಿದೆ. ಅದನ್ನು ನೋಡತಕ್ಕ ವಿಚಿತ್ರ ಪ್ರಸಂಗ ಹೋದವರಿಗೆಲ್ಲಾ ಒದೆಯನ್ನು ಹೊಡೆಯುತ್ತಾರೆ. ಈ ಪರಿಸ್ಥಿತಿ ನಿರ್ಮಾಣ ಮಾಡಿದರೆ, ಗೂಂಡಾಯಿಸಂ ಶುರುವಾದರೆ ಏನು ಮಾಡಬೇಕು? ಪತ್ರಿಕೆಯವರೂ ಇಲ್ಲ, ಮಾಧ್ಯಮದವರೂ ಇಲ್ಲ, ನಾವೂ ಇಲ್ಲವೆಂದರೆ ಸಮಾಜದ ಗತಿಯೇನಾಗುತ್ತದೆ ನೀವೆ ನೋಡಿ.

ಶ್ರೀ ರಾಮಲಿಂಗಾರೆಡ್ಡಿ: ಈಗ ಮಾನ್ಯ ಶಿವಣ್ಣನವರೇನು ಹೇಳಿದರು. ಅದರ ಬಗ್ಗೆ ತನಿಖೆ ಮಾಡಿಸೋಣ. ಈ ಸಲ 2006–07ಕ್ಕೆ ನೂರು ಪರ್‌ಸೆಂಟ್ ಗೌರ್ನಮೆಂಟ್ ಪ್ರೆಸ್‌ನಲ್ಲೇ ಪುಸ್ತಕಗಳನ್ನು ಪ್ರಿಂಟ್ ಮಾಡಿಸುತ್ತೇವೆ. ಪ್ರಿಂಟಿಂಗ್ ಕೆಲಸ ಈಗಾಗಲೇ ಪ್ರಾರಂಭವಾಗಿದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಪಠ್ಯಪುಸ್ತಕ ಮುದ್ರಣ ಮಾಡುವುದಕ್ಕೆ ಸರ್ಕಾರಿ ಮುದ್ರಣಾಲಯದಲ್ಲಿ ವ್ಯವಸ್ಥೆ ಇಲ್ಲವೆ ನಿಮಗೆ? ಸರ್ಕಾರಿ ಮುದ್ರಣಾಲಯ ಇಟ್ಟುಕೊಂಡಿರುವ ಉದ್ದೇಶವೇನು? ಇಷ್ಟೊಂದು ಅಧಿಕಾರಿಗಳು, ಇಷ್ಟೊಂದು ವ್ಯವಸ್ಥೆ ಇಟ್ಟುಕೊಂಡಿರುವಾಗ ಖಾಸಗಿಯವರಿಗೆ ಕೊಡುವುದೇನು? ಇದು ದೊಡ್ಡ ದರೋಡೆ, ವ್ಯಾಪಾರ, ಬಹಳ ಮೋಸ ಇದು, ಪಠ್ಯಪುಸ್ತಕವೆಂದು ಇಡೀ ಬೆಂಗಳೂರಿನಲ್ಲಿ ಯಾರ್ಯಾರಿಗೆ ಕೊಡುತ್ತೀರೋ, ಎಲ್ಲಿಗೆ ಕೊಡುತ್ತೀರೋ, ಯಾವ ಉದ್ದೇಶಕ್ಕೆ ಕೊಡುತ್ತೀರೋ, ಯಾವಾಗ ಮುದ್ರಣ ಮಾಡಿ ನಿಮಗೆ ಕೊಡುತ್ತಾರೊ, ಯಾವ ನೀತಿ ನಿಯಮ ಏನೆಂದರೆ ಏನೂ ಇಲ್ಲ. ಈ ವರ್ಷ ಮುಗಿದು ಕೊನೆಯ ವರ್ಷಕ್ಕೆ ಪಠ್ಯಪುಸ್ತಕಗಳು ಬರುತ್ತಿದೆ. ಇಡೀ ರಾಜ್ಯದಲ್ಲಿ ವಿದ್ಯಾರ್ಥಿಗಳು ಪಠ್ಯಪುಸ್ತಕಕ್ಕೋಸ್ಕರ ಅಹಾಕಾರಪಡುತ್ತಿದ್ದಾರೆ. ಪಠ್ಯ ಪುಸ್ತಕಗಳ ವ್ಯವಸ್ಥೆಯಾಗದಿದ್ದರೆ ಸರ್ಕಾರಿ ಮುದ್ರಣಾಲಯ ಏನಾಗಿದೆ?

ಅಧ್ಯಕ್ಷರು: ಒಂದೊಂದು ಪ್ರಶ್ನೆಗೆ ಹತ್ತತ್ತು ನಿಮಿಷವನ್ನು ತೆಗೆದುಕೊಂಡರೆ ಹೇಗೆ ಸದನವನ್ನು ನಡೆಸಬೇಕು? ಶಿಕ್ಷಣದ ಮೇಲೆ ಮಾತನಾಡುವಾಗ ನೀವು ಮಾತನಾಡಬಹುದು. ದಿಸ್ ಈಸ್ ನಾಟ್ ದಿ ವೇ... ಎಲ್ಲರೂ ಸಹಿತ ಎದ್ದು ನಿಂತುಕೊಂಡು ನಿಮಗೆ ಅನ್ನಿಸಿದ್ದನ್ನು ಪ್ರಶ್ನೋತ್ತರ ಕಾಲದಲ್ಲಿ ಹೇಳುತ್ತಿದ್ದರೆ ಸದನ ನಡೆಯಲಿಕ್ಕೆ ಆಗುತ್ತದೆಯೇ? ಇಲ್ಲ ಯಡಿಯೂರಪ್ಪನವರೇ; ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಯಂತ್ರಗಳು ಅಲ್ಲಿ ಎರಡು ವರ್ಷಗಳಿಂದ ಹಾಗೇ ಬಿದ್ದಿದೆ. ಇನ್ನು ಅದರ ಎರೆಕ್ಷನ್ ಆಗಿಲ್ಲ, ಇದು ನಿಮ್ಮ ಗಮನಕ್ಕೆ ಬಂದಿದೆಯೇ? ಇದನ್ನು ಯಾವಾಗ ಉಪಯೋಗಿಸಲಾಗುತ್ತದೆ?

ಶ್ರೀ ಆರ್. ರಾಮಲಿಂಗಾರೆಡ್ಡಿ: ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಹಿಂದೆ ಪಠ್ಯಪುಸ್ತಕಗಳ ಮುದ್ರಣಕ್ಕೆ ಪ್ರೈವೇಟ್‌ನವರಿಗೆ ಕೊಡುತ್ತಿದ್ದೆವು. ಈ ಬಾರಿ ನೂರಕ್ಕೆ ನೂರು ಭಾಗ ನಮ್ಮ ಸರ್ಕಾರಿ ಮುದ್ರಣಾಲಯಕ್ಕೆ ಕೆಪಾಸಿಟಿ ಇರುವಾಗ ಸರ್ಕಾರ ಮುದ್ರಣಾಲಯದಲ್ಲೇ ಪ್ರಿಂಟಿಂಗ್ ಮಾಡಿ ಎಂದು ಆದೇಶವನ್ನು ಕೊಟ್ಟಿದ್ದೇವೆ. ಹಾಗಾಗಿ ಅಲ್ಲೆಯೇ ಮುದ್ರಣ ಆಗುತ್ತಿದೆ. 2006–07ನೇ ಸಾಲಿಗೆ ಸಾಕಾಗುವಷ್ಟು ಪುಸ್ತಕಗಳನ್ನು ಸರ್ಕಾರಿ ಮುದ್ರಣಾಲಯದಲ್ಲಿಯೇ ಮುದ್ರಿಸಲಾಗುತ್ತಿದೆ. ಇನ್ನು ಉಳಿದಿರುವ ಖಾಸಗಿ ಶಾಲೆಗಳಿಗೆ ಮಾತ್ರ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಡಿ.ಎಸ್.ಆರ್.ಟಿ.ಸಿ, ಪಾರದರ್ಶಕವಾಗಿ ಟೆಂಡರ್ ಕರೆದು ಕಡಿಮೆ ವೆಚ್ಚ ತೋರಿಸುವ

ಟೆಂಡರ್‌ದಾರರಿಗೆ ಮಾತ್ರ ನಾವು ಕೆಲಸವನ್ನು ನೀಡಿದ್ದೇವೆ. ಇದರಲ್ಲಿ ಯಾವುದೇ ಅವ್ಯವಹಾರವಾಗಿಲ್ಲ. ಅಲ್ಲಿನ ಯಂತ್ರಗಳನ್ನು ಸದುಪಯೋಗ ಮಾಡಿಕೊಳ್ಳಲಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಪ್ಪು ತಿಳಿದುಕೊಳ್ಳಬೇಡಿ, ನೀವು ಬೇರೆ ಸಮಯದಲ್ಲಿ ಉತ್ತರವನ್ನು ಕೊಡಿ. ಕೋಟಿ ರೂಪಾಯಿ ಬೆಲೆ ಬಾಳುವ ಯಂತ್ರಗಳು ಅಲ್ಲಿ ಬಿದ್ದಿದೆ. ಒನ್‌ಟು ಡಬ್ಬಲ್ ಕೊಟ್ಟು ತಂದು ಲೂಟಿ ಮಾಡುತ್ತಿದ್ದಾರೆ. ಅಲ್ಲಿ ಕೆಲಸವೂ ನಡೆಯುತ್ತಿಲ್ಲ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿರುವಿರಿ?

ಅಧ್ಯಕ್ಷರು: ಅವರ ಹತ್ತಿರ ಎಲ್ಲಾ ಮಾಹಿತಿಗಳೂ ಇವೆ. ಶಿಕ್ಷಣದ ಮೇಲೆ ಚರ್ಚೆ ನಡೆಯುವಾಗ ನೀವು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮುದ್ರಣದಲ್ಲಿ ಆಗಿರುವ ದೋಷಗಳಂತೂ ಹೇಳತೀರದಾಗಿದೆ. ಅಕ್ಷರಗಳು ತುಂಬಾ ತಪ್ಪಾಗಿ ಬರೆದಿದ್ದಾರೆ. ಇದರ ಬಗ್ಗೆ ಕೂಡ ಲಕ್ಷ್ಯ ಇರಬೇಕು. ಅದನ್ನು ಸರಿಪಡಿಸಬೇಕು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3818
ಸದಸ್ಯರ ಹೆಸರು : ಶ್ರೀ ಜಯಪ್ರಕಾಶ್ ಹೆಗಡೆ
ಉತ್ತರಿಸಬೇಕಾದ ದಿನಾಂಕ : 13–7–2005
ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಕೇಂದ್ರ ಶಿಕ್ಷಣ ಕ್ಷೇತ್ರದಲ್ಲಿ ಆಂಗ್ಲ ಮಾಧ್ಯಮದ ತರಗತಿಗಳಲ್ಲಿ ಪ್ರಾಥಮಿಕ ಹಂತದಲ್ಲೇ ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸುವ ಬಗ್ಗೆ ರಾಜ್ಯ ಸರ್ಕಾರವು ಕೈಗೊಂಡಿರುವ ಕ್ರಮವೇನು;	ಕೇಂದ್ರ ಶಿಕ್ಷಣ ಯೋಜನೆಯಡಿಯಲ್ಲಿ ನಡೆಯುವ ಶಾಲೆಗಳಲ್ಲಿ ಐ.ಸಿ.ಎಸ್.ಸಿ.ಇ ಹಾಗೂ ಸಿ.ಬಿ.ಎಸ್.ಇ ಪಠ್ಯಕ್ರಮದ ಅನುಸಾರವಾಗಿ ಶಿಕ್ಷಣ ನಡೆಯುತ್ತಿದೆ. ಆದುದರಿಂದ ಅಂತಹ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸುವ ಬಗ್ಗೆ ಸರ್ಕಾರ ಸದರಿ ಸಂಸ್ಥೆಗಳ ಜೊತೆ ಸಮಾಲೋಚನೆ ನಡೆಸಲಾಗುವುದು.
ಆ.	ಸಿ.ಬಿ.ಎಸ್.ಇ. ಹಾಗೂ ಐ.ಸಿ.ಎಸ್.ಇ ಕನ್ನಡ ಪುಸ್ತಕದಲ್ಲಿ ಕಳಪೆ ಗುಣಮಟ್ಟದ ಪಾಠಗಳು ಹಾಗೂ ಕೆಟ್ಟ ಪದಗಳು ಉಪಯೋಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.